ಮಾಡುತ್ತೇವೆ.

ವಿಷಯ : ಕುಂದಾಪುರ ವಿಧಾನಸಭಾ ಕ್ಷೇತ್ರದ ಕೋಟ-ಗೋಳಿ ಆಂಗಡಿ ರಸ್ತೆಯನ್ನು ಟಾರುಹಾಕಿ ಪೂರ್ಣಗೊಳಿಸುವ ಕುರಿತು.

ಪ್ರಶ್ನೆ : 187 (271) ಶ್ರೀ ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ) —ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕುಂದಾಪುರ ವಿಧಾನಸಭಾ ಕ್ಷೇತ್ರಕ್ಕೊಳಪಟ್ಟ ಕೋಟ—ಗೋಳಿ ಆಂಗಡಿ ರಸ್ತೆಯಲ್ಲಿ ಕಳೆದ 20 ವರ್ಷಗಳಿಂದ ಬಸ್ಸು ಸಂಚಾರವಾಗುತ್ತಿದ್ದು ಈ ತನಕ ಡಾಂಬರ ಸಂಪೂರ್ಣ ಹಾಕದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಆ) ಈ ಬಗ್ಗೆ ಸ್ಥಳೀಯ ಜನತೆಯ ಪ್ರತಿಭಟನಾ ಮನವಿ ಸರ್ಕಾರಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ ಅಪೂರ್ಣವಾದ ಸದರಿ ಡಾಂಬರ ರಸ್ತೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು ?

ಉತ್ತರ : ಶ್ರೀ ಹೆಚ್. ಡಿ. ದೇವೇಗೌಡ(ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಬಂದಿದೆ.

ಆ) ಸಾರ್ವಜನಿಕರ ಮನವಿ ಬಂದಿದೆ.

ಇ) ಆರ್ಥಿಕ ಪರಿಸ್ಥಿತಿಯನ್ನು ಅವಲಂಬಿಸಿ ಈ ಕಾಮಗಾರಿಯನ್ನು ಹಂತ ಹಂತವಾಗಿ ಪೂರ್ಣಗೊಳಿಸುವುದನ್ನು ಪರಿಶೀಲಿಸಲಾಗುವುದು.

ಶ್ರೀ ಹೆಚ್. ಡಿ. ದೇವೇಗೌಡ.— ಇದರ ಜೊತೆಗೆ ಮಾನ್ಯ ಸದಸ್ಯರಿಗೆ ವಿವರಣೆ ಕೊಟ್ಟರೆ ಒಳ್ಳೆಯದು ಎಂದು ಭಾವಿಸುತ್ತೇನೆ. ಮಾನ್ಯ ಸದಸ್ಯರು ಕೇಳಿದ ರಸ್ತೆಯ ಉದ್ದ 26 ಕಿ. ಮೀಟರ್, ಇದರಲ್ಲಿ 15 ಕಿ. ಮೀಟರನ್ನು ಹಂತ ಹಂತವಾಗಿ ಬ್ಲಾಕ್ ಟಾಪಿಂಗ್ ಮಾಡತಕ್ಕಂಥಾದ್ದು ಸರ್ಕಾರದ ಗಮನದಲ್ಲಿರೆಯೆಂದು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ. ಬ್ಲಾಕ್ ಟಾಪಿಂಗ್ ಮಾಡುವುದಕ್ಕೆ 8 ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಮಾನ್ಯ ಸದಸ್ಯರ ತೀವ್ರತೆಯನ್ನು ನಾನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದೇನೆ. ಸಾಧ್ಯವಾದರೆ ಇದನ್ನು ಮುಂದಿನ ವರ್ಷ ತೆಗೆದುಕೊಳ್ಳುವುದಕ್ಕೆ ತೀವ್ರವಾಗಿ ಪ್ರಯತ್ನ ಮಾಡುತ್ತೇನೆ.

ವಿಷಯ : ಚುಕ್ಕೆ ಗುರುತಿನ ಪ್ರಶ್ನೆ 574 ಶ್ರೀ ಮಲ್ಲಿಕಾರ್ಜುನ ಬಸಪ್ಪ ದಿವಟರ (ಕೊಪ್ಪಳ).

ಪ್ರಶ್ನೆ : 188 (574) ಶ್ರೀ ಮಲ್ಲಿಕಾರ್ಜುನ ಬಸಪ್ಪ ದಿವಟರ್ (ಕೊಪ್ಪಳ).— ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

1) ತುಂಗಭದ್ರಾ ಎಡದಂಡೆ ನಾಲೆಯು ಪದೇ ಪದೇ ಒಡೆದು ರಾಯಚೂರು ಜಿಲ್ಲೆಯ ರೈತರಿಗೆ ತೊಂದರೆ ಉಂಟಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

2) ಈ ಎಡದಂಡೆ ನಾಲೆಯನ್ನು ಶಾಶ್ವತವಾಗಿ ದುರಸ್ತಿಗೊಳಿಸಲು ಸರ್ಕಾರದವರು ಕೈಗೊಳ್ಳುವ ಕ್ರಮವೇನು ;

3) ಶಾಶ್ವತ ಪರಿಹಾರ ಒದಗಿಸಲು ತಗಲುವ ಅಂದಾಜು ವೆಚ್ಚವೆಷ್ಟು ?

ಉತ್ತರ ಶ್ರೀ ಹೆಚ್. ಡಿ. ದೇವೇಗೌಡ(ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

1) ಬಂದಿದೆ.

2) ಪರಿಣಿತ ಇಂಜಿನಿಯರುಗಳ ಸಮಿತಿಯ ವರದಿಯ ಸಲಹೆಯ ಮೇಲೆ ಎಡದಂಡೆ ನಾಲೆಯ ಒಳಮುಖವನ್ನು ಬಲಪಡಿಸುವ ಕಾರ್ಯಗಳನ್ನು ತೆಗೆದುಕೊಳ್ಳಲಾಗಿದೆ. ಈ ಕಾರ್ಯವನ್ನು 3ವರ್ಷಗಳಲ್ಲಿ ನಾಲೆಯನ್ನು ದೀರ್ಘವಾಗಿ ಮುಚ್ಚುವ ಅವಧಿಯಲ್ಲಿ ಪೂರ್ಣಗೊಳಿಸುವ ಕಾರ್ಯ ಕ್ರಮವಿದೆ.

3) 12.69 ಲಕ್ಷ ರೂಪಾಯಿಗಳು.

ಶ್ರೀ ಹೆಚ್. ಡಿ. ದೇವೇಗೌಡ.—1983-84ರಲ್ಲಿ ಮಾರ್ಚ್ ತಿಂಗಳವರೆಗೆ 1.7 ಲಕ್ಷ ರೂಪಾಯಿಗಳನ್ನು ಈ ಕಾಲುವೆಯ ಒಳಭಾಗದ ರಿಪೇರಿಗೆ ಖರ್ಚು ಮಾಡುವುದಕ್ಕೆ ಇಟ್ಟುಕೊಂಡಿದ್ದೇವೆ. ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಒಟ್ಟು 4 ಕೋಟಿ ರೂಪಾಯಿಗಳನ್ನು ಇನ್ಸರ್‌ಲೈನ್ಸ್ ಭದ್ರಪಡಿಸುವುದಕ್ಕೋಸ್ಕರ ಖರ್ಚು ಮಾಡಬೇಕೆಂದಿದ್ದೇವೆ. ಮೂರು ವರ್ಷಗಳಲ್ಲಿ ಈ ಕೆಲಸ ಮಾಡತಕ್ಕಂಥ ನಿರ್ಣಯವನ್ನು ಸರ್ಕಾರ ಮಾಡಿದೆ.

ಶ್ರೀ ಮಲ್ಲಿಕಾರ್ಜುನ ಬಸಪ್ಪ ದಿವಟರ್.—ಈ ದುರಸ್ತಿ ಕೆಲಸವನ್ನು ಮೂರು ವರ್ಷಗಳ ಒಳಗೆ ಸಂಪೂರ್ಣವಾಗಿ ಮಾಡುತ್ತೇವೆಂದು ಮಾನ್ಯ ಸಚಿವರು ತಿಳಿಸಿದ್ದಾರೆ. ಈ ಮೂರು ವರ್ಷಗಳವರೆಗೆ ಕಾಲುವೆಯನ್ನು ಮುಚ್ಚಿರುವುದರಿಂದ ರೈತರಿಗೆ ಬಹಳ ತೊಂದರೆಯಾಗುತ್ತದೆ. ಈ ತಾಲ್ಲೂಕಿನಲ್ಲಿ ಅದರಲ್ಲಿಯೂ ವಿಶೇಷವಾಗಿ ಕೊಪ್ಪಳ, ಗಂಗಾವತಿಯಲ್ಲಿ ರೈತರು ಕಬ್ಬು ಬೆಳೆಯುತ್ತಾರೆ, ರೈತರಿಗೆ